ಶ್ರೀ ಎಚ್. ಪಿ. ನರಸಿಂಹೇಗೌಡ.—ಈ ಮೂರು ವರ್ಷದ ಅವಧಿಯಲ್ಲಿ ಅವುಗಳನ್ನು ತೆಗೆದುಕೊಂಡು ರಿಪೇರಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹಣ ಒದಗುವುದಾದರೆ ಮೂರು ವರ್ಷ ಬೇಕಾಗಿಲ್ಲ. ಒಂದೇ ವರ್ಷದಲ್ಲಿ ಮಾಡಬಹುದು.

---

**District Board Roads proposed to be included in the State Fund Roads in Bangalore District.**

*Q.*—350. **Sri K. V. BYRE GOWDA** (Bangalore North).—

Will the Government be pleased to state :—

the number of District Board roads in Bangalore District that are proposed to be included in the "State Fund" roads with their names and respective mileage (Talukwar figures may be furnished) ?

*A.*—**Sri H. K. VEERANNA GOWDH** (Minister for Public Works).—

A total length of 250 miles was proposed to be taken over. Details are still under examination.

ಶ್ರೀ ಕೆ. ವಿ. ಬೈರೇಗೌಡ—250 ಮೈಲಿ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದಿದೆಯೆಂದು ಹೇಳಿದ್ದೀರಿ. ಇವುಗಳನ್ನು ತೆಗೆದುಕೊಳ್ಳುವುದರಲ್ಲಿ ಏನಾದರೂ ಪ್ರಯೋರಿಟಿಯಮೇಲೆ ತೆಗೆದುಕೊಳ್ಳುತ್ತೀರಾ ಅಥವಾ ಯಾವ ಸನ್ನಿವೇಶ ನೋಡಿಕೊಂಡು ತೆಗೆದುಕೊಳ್ಳುತ್ತೀರಿ ?

*ಶ್ರೀ ಎಚ್. ಕೆ. ವೀರಣ್ಣಗೌಡ.—250 ಮೈಲಿಗಳನ್ನು ತೆಗೆದುಕೊಂಡರೆ ಇಷ್ಟು ಖರ್ಚಾಗುತ್ತದೆಂದು ಹೇಳಿದ್ದಾರೆ. ಅದರಮೇಲೆ ಕಡಮೆ ತೆಗೆದುಕೊಂಡರೆ ಒದಗಿಸುವುದಕ್ಕಾಗುತ್ತದೆಯೇ ನೋಡಿಕೊಂಡು ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಸೇತುವೆಗಳನ್ನೇನಾದರೂ ಕಟ್ಟ ಬೇಕಾಗುತ್ತದೆಯೇ ಮುಂತಾಗಿ ನಾನಾ ವಿವರಗಳನ್ನು ನೋಡಿಕೊಂಡು ಮಾಡುತ್ತೇವೆ.

ಶ್ರೀ ಕೆ. ವಿ. ಬೈರೇಗೌಡ.—ಬನ್ನುಗಳ ರಾಷ್ಟ್ರೀಕರಣವಾದಮೇಲೆ ಬೇಕಾದಷ್ಟು ಖರ್ಚಾಗಿ ಬನ್ನುಗಳು ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳಲ್ಲಿ ಓಡಾಡುವುದಕ್ಕೆ ಷುರುವಾಗಿರುವುದರಿಂದ ಈ ರಸ್ತೆಗಳಿಗೆ ಪ್ರಯಾರಿಟಿ ಕೊಟ್ಟು ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಯೋಚನೆ ಮಾಡುತ್ತೇವೆ.

**Sri J. H. SHAMSUDDIN.**—What are the criteria for taking over these roads from the D.L.B. to the P.W.D. ?

ಶ್ರೀ ಎಚ್. ಕೆ. ವೀರಣ್ಣಗೌಡ.—criteria ಏನೂ ಇಲ್ಲ. ಮೊದಲನೆಯದಾಗಿ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಹಣವಿಲ್ಲದಿರುವುದು, ಎರಡನೆಯದಾಗಿ ಆ ರಸ್ತೆಗಳು ಪ್ರಾಮುಖ್ಯವಾದುವೇ ಎಂಬುದನ್ನು ನೋಡಬೇಕು. ಡಿಸ್ಟ್ರಿಕ್ಟ್ ಬೋರ್ಡಿನವರು ಅವುಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕೆ ಹಣವಿಲ್ಲವೆಂದು ಈಗ ಸರ್ಕಾರದವರು ತೆಗೆದುಕೊಳ್ಳಬೇಕೆಂದು ಯೋಚನೆಮಾಡುತ್ತಿದ್ದಾರೆ.

**Sri J. H. SHAMSUDDIN.**—Will Government extend the same criteria to the other D.L.B. roads in the other parts of the State ?

**Sri H. K. VEERANNA GOWDH.**—As I explained yesterday, it is the intention of Government to make this principle applicable to the whole State.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಬೋರ್ಡ್ ರಸ್ತೆಗಳನ್ನು P.W.D.ಗೆ ತೆಗೆದುಕೊಳ್ಳುವ ಯೋಜನೆಯೂ ಸೇರಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಏನೂ ಇಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳನ್ನು ಉತ್ತಮಪಡಿಸುವುದಕ್ಕೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಏನು ಕಾರ್ಯಕ್ರಮ ಇಟ್ಟುಕೊಂಡಿದ್ದೀರಿ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರತಿಗಳನ್ನು ಮಾನ್ಯ ಸದಸ್ಯರಿಗೆ ಹಂಚಿದೆ.

9-30 A.M.

**Sri Kadidal MANJAPPA.**—Is the Government aware that, when I was the Revenue Minister, I gave an assurance to the Legislature that the Government would take over the roads from the District Boards to compensate them for the loss occasioned on account of the amendment made to the District Boards Act ?

**Sri H. K. VEERANNA GOWDH.**—Because of that assurance Government requested the Chief Engineer to submit proposals to the Government in consultation with Deputy Commissioners and District Boards as to the roads which are to be taken over by the Government and I have explained a number of times in this House the reasons for not taking a final decision.

**Sri H. M. CHANNABASAPPA.**—Was it on the initiative of the District Boards that this proposal was made or did Government call for proposal from the Special Officers of the District Boards ?

**Sri H. K. VEERANNA GOWDH.**—I have explained that the Government asked the Chief Engineer to submit proposals in consultation with the Deputy Commissioners and the District Boards concerned.

Sri H. M. CHANNABASAPPA.—My question is specific and I want a specific answer.

Sri H. K. VEERANNA GOWDH.—If I have understood the Hon'ble Member correctly, he wants to know whether this proposal originated from Government or from the District Boards. On the representations made by the District Boards earlier, the Government took a decision and the procedure followed.

Sri H. M. CHANNABASAPPA.—Shall we take it that the Government called for the proposal from the Special Officers?

Sri H. K. VEERANNA GOWDH.—Government did not call for proposals from the Special Officers but asked the Chief Engineer to call for them from the Deputy Commissioners, the District Boards and everybody concerned.

Sri H. M. CHANNABASAPPA.—Were there any circumstances which prompted the Government to call for proposals from the various District Boards with regard to taking over 250 miles in each district?

Sri H. K. VEERANNA GOWDH.—Just now, in answer to the Hon'ble Member Sri Kadidal Manjappa, I said that the Government had made a promise in this behalf. Because the Government had taken a decision, it had to follow a procedure.

Sri H. M. CHANNABASAPPA.—Are the Government thinking of revising the Government Order that was once passed?

Sri H. K. VEERANNA GOWDH.—Because of the financial implications Government are considering whether to revise it or not. No final decision has yet been taken.

Sri H. M. CHANNABASAPPA.—Is the Government aware that after knowing the full financial implications the Government took the decision to take over 250 miles in each district?

Sri H. K. VEERANNA GOWDH.—When the decision was taken, the position was quite different. That decision was with regard to the old Mysore State. Now, the situation has changed. Now, we have to take a decision with regard to the whole State. Even with regard to the old Mysore State, after the Government's decision was announced, the Chief Engineer was informed. After going into the details, he found out that so much money will be required. Now, if we take into consideration the whole State, the expenditure will be much more. All these questions have to be examined again.

Sri Kadidal MANJAPPA.—Is it not a fact that the District Boards are going to lose 6¼ per cent of the land revenue as a result of the amendment of Village Panchayats Act and the District Board Act in 1956?

Sri R. CHENNIGARAMIAH.—They are getting it now.

Sri H. K. VEERANNA GOWDH.—How does it come under this question?

Mr. SPEAKER.—That is a different question.

---

## Delay in Releasing Forest Lands.

*Q.*—128. Sri D. T. SEETHARAMA RAO (Bhadravati).—

Will the Government be pleased to state :—

whether they are aware of the delay caused in the release of forest lands in the atchkat of the Bhadra left channel?

*A.*—Sri H. S. RUDRAPPA (Minister for Agriculture).—

Yes. The delay is mainly due to the difficulty in locating correctly the exact plots which come under the irrigable zone of the different survey numbers. Steps have been taken to obtain the particulars of the irrigable zone and the requisite maps so that the matter could be disposed of expeditiously.

ಶ್ರೀ ಡಿ. ಟಿ. ಸೀತಾರಾಮರಾವ್.—ಭದ್ರಾ ಎಡ ನಾಲೆ ಅಚ್ಚುಕಟ್ಟಿನಲ್ಲಿ ಅರಣ್ಯ ಭೂಮಿ ಎಷ್ಟು ಎಕರೆ ಇದೆ?

ಶ್ರೀ ಎಚ್. ಎಸ್. ರುದ್ರಪ್ಪ.—ಫಾರೆಸ್ಟ್ ಏರಿಯಾದಲ್ಲಿ ಎಷ್ಟು ನೀರಾವರಿ ಯಾಗುತ್ತದೆ ಎಂದು ಸರಿಯಾಗಿ ಮ್ಯಾಪು, ನಂಬರು ಕಳುಹಿಸಿಲ್ಲ. ಇಂಜನಿಯರಿಂಗ್ ಇಲಾಖೆಯವರು ಅದನ್ನು ಕಳುಹಿಸಿದಮೇಲೆ ಖಚಿತವಾಗಿ ಎಷ್ಟಾಗುತ್ತದೆ ಎಂದು ಗೊತ್ತಾಗುತ್ತದೆ.

ಶ್ರೀ ಡಿ. ಟಿ. ಸಿತಾರಾಮರಾವ್.—ಎಡನಾಲೆ ತೆಗೆದು ಈಗ ಎಷ್ಟುವರ್ಷ ಆಯಿತು?

ಶ್ರೀ ಎಚ್. ಎಸ್. ರುದ್ರಪ್ಪ.—ಈ ವರ್ಷ ತೆಗೆದಿದ್ದಾರೆ.